**ಭಾವಜ್ಞೇನ ಕೃತಜ್ಞೇನ ಧರ್ಮಜ್ಞೇನ ಚ ಲಕ್ಷ್ಮಣ ।**
**ತ್ವಯಾ ಪುತ್ರೇಣ ಧರ್ಮಾತ್ಮಾ ನ ಸಂವೃತ್ತಃ ಪಿತಾ ಮಮ ॥** *(ವಾಲ್ಮೀಕಿ ರಾಮಾಯಣ, ಅರಣ್ಯಕಾಂಡ ೧೫:೨೯)*

"ಲಕ್ಷ್ಮಣ, ನನ್ನ ಭಾವವನ್ನೂ, ಧರ್ಮವನ್ನೂ ತಿಳಿದು ನೀನು ಎಂತಹ ಮಹತ್ತಾದ ಕೆಲಸವನ್ನು ಮಾಡಿರುವೆ. ನನಗೆ ಎಷ್ಟು ಸಂತೋಷವುಂಟಾಗಿದೆ. ಧರ್ಮಾತ್ಮನಾದ ನನ್ನ ತಂದೆ ಇಲ್ಲಿ ನಿನ್ನ ರೂಪಿನಲ್ಲಿದ್ದಾನೆ ಎಂದು ತಿಳಿಯುತ್ತೇನೆ" ಎನ್ನುತ್ತಾನೆ ರಾಮ. ತಂದೆ ಜೀವಂತವಾಗಿದ್ದರೆ ಏನೇನು ಮಾಡುತ್ತಿದ್ದನೋ ಅದೆಲ್ಲವನ್ನೂ ಲಕ್ಷ್ಮಣ ಮಾಡುತ್ತಿದ್ದಾನೆ. "ಕಾಡಿನಲ್ಲಿ ರಾಮನಿಗೆ ಲಕ್ಷ್ಮಣ ಸಾಕ್ಷಾತ್ ತಂದೆಯಂತೆಯೇ ಇದ್ದ" ಎಂಬ ವಾಲ್ಮೀಕಿಗಳ ಈ ನಿರೂಪಣೆ ಬೇರೆಲ್ಲೂ ಕಾಣದ ಆದರ್ಶ. ಅಶೋಕವನದಲ್ಲಿ ಸೀತೆ ಹನುಮಂತನಿಗೆ, ರಾಮನಿಗೆ ಲಕ್ಷ್ಮಣನ ಮೇಲಿದ್ದ ಭಾವವನ್ನು ತಿಳಿಸುವಾಗ ಇದನ್ನೇ ಹೀಗೆ ಸಮರ್ಥಿಸುತ್ತಾಳೆ: **ಯಂ ದೃಷ್ಟ್ವಾ ರಾಘವೋ ನೈವ ವೃತ್ತಮಾರ್ಯಮನುಸ್ಮರೇತ್ ।** (ವಾಲ್ಮೀಕಿ ರಾಮಾಯಣ, ಸುಂದರಕಾಂಡ ೩೮:೬೩) – ರಾಮನು ತಮ್ಮನಾದ ಲಕ್ಷ್ಮಣನಲ್ಲಿ ತನ್ನ ತಂದೆಯನ್ನೇ ಕಾಣುತ್ತಿದ್ದನು. ಹೀಗಾಗಿ ಗತಿಸಿದ ತನ್ನ ತಂದೆಯನ್ನು ನೆನಪಿಸಿಕೊಳ್ಳುವ ಪ್ರಮೇಯ ಅವನಿಗೆ ಬರಲಿಲ್ಲ ಎಂದು ಇದರ ತಾತ್ಪರ್ಯ.

ಪಂಚವಟಿಯ ಈ ಕುಟೀರದಲ್ಲಿ ಅವರೆಲ್ಲರೂ ಸ್ವರ್ಗಸುಖಗಳನ್ನು ಅನುಭವಿಸುತ್ತಿದ್ದರು. ಒಂದು ಸಲ ಕುಟೀರದ ಮುಂದೆ ತುಂಬಾ ಸುಂದರವಾದ ಹೊಳೆಯುವ ಚುಕ್ಕೆಗಳುಳ್ಳ ಜಿಂಕೆಯನ್ನು ಅವರು ನೋಡಿದರು. ಸೀತೆಯು ಅದಕ್ಕಾಗಿ ತುಂಬಾ ಹಂಬಲಿಸುತ್ತಾಳೆ. ಆಗ ಲಕ್ಷ್ಮಣನು ರಾಮನಿಗೆ ಎಚ್ಚರಿಸುತ್ತಾನೆ, "ಈ ರೀತಿಯ ಮೃಗವನ್ನು ನಾವು ಇಷ್ಟು ಕಾಲ ಎಲ್ಲೂ ನೋಡಲಿಲ್ಲ, ಇದರಲ್ಲಿ ಮೋಸವೇನೋ ಇದೆ, ಅಣ್ಣಾ! ಮಾರೀಚನೇ ಈ ರೂಪಿನಲ್ಲಿ ಬಂದಿರಬಹುದು" ಎಂದು ತನ್ನ ಸಂದೇಹವನ್ನು ತಿಳಿಸುತ್ತಾನೆ. ಆದರೆ ಸೀತೆ ಅವನ ಮಾತನ್ನು ತಡೆದು, ಅದು ತನಗೆ ಬೇಕೇಬೇಕೆನ್ನುತ್ತಾಳೆ. ರಾಮನು ಆ ಜಿಂಕೆಯ ಸೌಂದರ್ಯಕ್ಕೆ ಆಕರ್ಷಿತನಾಗಿ, "ಜಿಂಕೆಯೇ ಆದರೆ ಕುಟೀರದಲ್ಲಿ ಸಾಕಲು ಯೋಗ್ಯ; ಜಿಂಕೆಯ ರೂಪದಲ್ಲಿ ಬಂದ ರಾಕ್ಷಸನಾದರೆ ಕೊಲ್ಲುವುದೇ ಸರಿ" ಎಂದು ನಿರ್ಣಯಿಸುತ್ತಾನೆ. ಲಕ್ಷ್ಮಣನಿಗೆ ಅಲ್ಲೇ ಇದ್ದು, ಸೀತೆಯ ರಕ್ಷಣೆಯನ್ನು ಮಾಡುವಂತೆ ಹೇಳಿ, ಜಿಂಕೆಯನ್ನು ಹಿಂಬಾಲಿಸುತ್ತಾನೆ. ಮೋಸಕ್ಕೆ ಒಳಗಾಗಿ, ರಾಮಲಕ್ಷ್ಮಣರಿಬ್ಬರೂ ಕುಟೀರದಿಂದ ದೂರವಾದ ಮೇಲೆ, ಸೀತೆಯನ್ನು ಅಪಹರಿಸಿಕೊಂಡು ಹೋಗಲು, ರಾವಣನು ಸಂನ್ಯಾಸಿಯ ವೇಷದಲ್ಲಿ ಬರುತ್ತಾನೆ. ಸೀತೆಯು, "ಓ ಲಕ್ಷ್ಮಣ! ಮಹಾಬಾಹುವೆ, ಈ ರಾವಣನಿಂದ ನನ್ನನ್ನು ರಕ್ಷಿಸು" ಎಂದು ಕೂಗಿಕೊಳ್ಳುತ್ತಾಳೆ. ಅದನ್ನು ಕೇಳಿ, ಜಟಾಯು ಬರುತ್ತಾನೆ. ಜಟಾಯು ರಾವಣನಿಗೆ ಒಳ್ಳೆಯ ಮಾತುಗಳನ್ನು ಹೇಳುತ್ತಾನೆ; ಕೇಳದೇ ಹೋದಾಗ ಭಯಂಕರವಾಗಿ ಯುದ್ಧಮಾಡಿ, ರಾವಣನ ರಥವನ್ನು ಮುರಿದುಹಾಕುತ್ತಾನೆ. ಕೊನೆಗೆ ರಾವಣನು ಜಟಾಯುವಿನ ರೆಕ್ಕೆಯನ್ನು ಕತ್ತರಿಸಿ ಹಾಕಿದುದರಿಂದ ನೆಲದ ಮೇಲೆ ಜ್ಞಾನವಿಲ್ಲದೆ ಬೀಳುತ್ತಾನೆ. ರಾಮಲಕ್ಷ್ಮಣರಿಗೆ ಈ ಸುದ್ದಿಯನ್ನು ತಿಳಿಸುವುದಕ್ಕಾಗಿ ಜೀವ ಹಿಡಿದುಕೊಂಡು, ಎಲ್ಲಾ ನೋವನ್ನೂ ಅನುಭವಿಸುತ್ತಾನೆ. ಮಿತ್ರನಿಗಾಗಿ ಎಂತಹ ತ್ಯಾಗ!

ಸೀತೆಯನ್ನು ಹುಡುಕುತ್ತಾ ಬಂದ ರಾಮಲಕ್ಷ್ಮಣರಿಗೆ ನಡೆದುದನ್ನೆಲ್ಲಾ ತಿಳಿಸಿ, ಜಟಾಯು ಪ್ರಾಣ ಬಿಡುತ್ತಾನೆ. ತಂದೆಯ ಸಮಾನನಾದ, ತಂದೆಯ ಪ್ರಿಯಸ್ನೇಹಿತನೂ ಆಗಿದ್ದ ಜಟಾಯುವಿನ ತ್ಯಾಗ ಶ್ಲಾಘನೀಯ, ಮಾನನೀಯ ಎಂದು ರಾಮನು ಅವನನ್ನು ಬಿಗಿದಪ್ಪಿ, ಮೈಯೆಲ್ಲಾ ಸವರಿ, ಕಣ್ಣೀರು ಸುರಿಸುತ್ತಾನೆ. ತಂದೆಗೆ ಮಾಡಿದಂತೆಯೇ ಅವನಿಗೂ ಅಂತ್ಯಸಂಸ್ಕಾರವನ್ನು ಮಾಡಿ, ತರ್ಪಣ ಕೊಡುತ್ತಾನೆ. ಹೀಗೆ ಜಟಾಯುವಿಗೆ ಮಂತ್ರಪೂರ್ವಕ ಸಂಸ್ಕಾರವನ್ನು ಮಾಡಿ, ಪುಣ್ಯಲೋಕವನ್ನು ಒದಗಿಸಿಕೊಡುತ್ತಾನೆ.

ಸೀತೆಯನ್ನು ಹುಡುಕುತ್ತಾ ಮುಂದೆ ಮುಂದೆ ಸಾಗುತ್ತಿರುವಾಗ, ಕಬಂಧನೆಂಬ ರಾಕ್ಷಸನು ಈ ಇಬ್ಬರನ್ನೂ ತನ್ನ ಬೃಹತ್ತಾದ ಕೈಗಳಿಂದ ಸೆಳೆದುಕೊಳ್ಳುತ್ತಾನೆ. ಆಗ ಲಕ್ಷ್ಮಣನು ರಾಮನಿಗೆ, "ಕುಟುಂಬದ ಕ್ಷೇಮಕ್ಕಾಗಿ ನೀನು ರಾಕ್ಷಸನ ಕೈಗಳಿಂದ ತಪ್ಪಿಸಿಕೊಂಡು ಹೋಗು, ನಾನು ಅವನಿಗೆ ಆಹಾರವಾಗುವೆ" ಎಂದು ತಿಳಿಸುತ್ತಾನೆ. ಕೊನೆಗೆ ಕಬಂಧನಿಗೆ ಮುಕ್ತಿಕೊಟ್ಟು, ರಾಮಲಕ್ಷ್ಮಣರು ಅವನು ತೋರಿಸಿದ ದಾರಿಯಲ್ಲಿ ಮುಂದೆ ಸಾಗುತ್ತಾರೆ. ಪಂಪಾಸರೋವರದ ಸೌಂದರ್ಯವನ್ನು ನೋಡಿ, ರಾಮನು ಸೀತೆಯನ್ನು ನೆನೆದು, ಕಣ್ಣೀರು ಸುರಿಸುತ್ತಾನೆ. ಆಗ ಲಕ್ಷ್ಮಣನು ಅಣ್ಣನಿಗೆ ಧೈರ್ಯದ, ಉತ್ಸಾಹದ ಮಾತುಗಳನ್ನು ಹೇಳುತ್ತಾನೆ. ರಾಮನು ಲಕ್ಷ್ಮಣನ ಮಾತಿನಿಂದ ಸಮಾಧಾನಗೊಂಡು, ಸೀತೆಯನ್ನು ಹುಡುಕುವ ಕೆಲಸವನ್ನು ಮುಂದುವರಿಸುತ್ತಾನೆ. ರಾಮನ ಈ ಮನಃಸ್ಥಿತಿಯನ್ನು ಗಮನಿಸಿದ ಲಕ್ಷ್ಮಣನು ರಾಮನನ್ನು ಬಹಳ ಎಚ್ಚರಿಕೆಯಿಂದ ಕಾಯುತ್ತಿರುತ್ತಾನೆ.

ಅನಂತರ ರಾಮಲಕ್ಷ್ಮಣರಿಗೆ ಸುಗ್ರೀವನ ಸ್ನೇಹವಾಗಿ ಅವನ ಸಹಾಯದಿಂದ ಅವರು ಸೀತೆಯನ್ನು ಹುಡುಕಲು ಆರಂಭಿಸುತ್ತಾರೆ. ಸಮುದ್ರವನ್ನು ದಾಟಿ, ಕಪಿಸೇನೆಯ ಸಹಾಯದಿಂದ ರಾವಣನೊಡನೆ ಯುದ್ಧ ಮಾಡುತ್ತಾರೆ. ಒಮ್ಮೆ ಲಕ್ಷ್ಮಣನು ಇಂದ್ರಜಿತ್ ಪ್ರಯೋಗ ಮಾಡಿದ ನಾಗಪಾಶದಿಂದ ಪ್ರಜ್ಞೆಯಿಲ್ಲದೆ ಬಿದ್ದಿದ್ದನ್ನು ನೋಡಿ, ರಾಮನ ದುಃಖದ ಕಟ್ಟೆ ಒಡೆದುಹೋಗುತ್ತದೆ. "ಇಂತಹ ತಮ್ಮನನ್ನು ಕಳೆದುಕೊಂಡು ನಾನು ಬದುಕಿಯಾದರೂ ಏನು ಪ್ರಯೋಜನ, ಹುಡುಕಿದರೆ ಸೀತೆಯಂತಹ ಪತ್ನಿಯು ಸಿಗಬಹುದು, ಆದರೆ ಲಕ್ಷ್ಮಣನಂತಹ ತಮ್ಮ! ಅಂಥವನು ಎಲ್ಲಿ ತಾನೆ ಸಿಗುವನು. ಲಕ್ಷ್ಮಣನಿಲ್ಲದೆ ನಾನು ಜೀವಿಸಲಾರೆ. ನನಗಾಗಿ ಲಕ್ಷ್ಮಣ ಇಷ್ಟೆಲ್ಲಾ ಕಷ್ಟ, ನೋವುಗಳನ್ನು ಅನುಭವಿಸಿದ. ನನ್ನ ಬಾಳಿಗೆ ಧಿಕ್ಕಾರವಿರಲಿ" ಎಂದು ಆಕ್ರಂದನ ಮಾಡುತ್ತಾನೆ.

**ದೀಪ್ತಮಗ್ನಿಮರಣ್ಯಂ ವಾ ಯದಿ ರಾಮಃ ಪ್ರವೇಕ್ಷ್ಯತೇ । ಪ್ರವಿಷ್ಟಂ ತತ್ರ ಮಾಂ ದೇವಿ ತ್ವಂ ಪೂರ್ವಮವಧಾರಯ ॥**

" 'ರಾಮನು ಉರಿಯುತ್ತಿರುವ ಅಗ್ನಿಯನ್ನೋ, ಕಾಡನ್ನೋ ಪ್ರವೇಶಿಸುವುದಾದರೆ ಮೊದಲು ನಾನು ಅಲ್ಲಿ ಪ್ರವೇಶಿಸುತ್ತೇನೆ' ಎಂದು ಪ್ರತಿಜ್ಞೆ ಮಾಡಿ ಅದ್ಭುತವಾದ ತ್ಯಾಗದ ಮೂಲಕ ಲಕ್ಷ್ಮಣನು ನನ್ನನ್ನು ಅನುಸರಿಸಿ ಬಂದಂತೆ, ನಾನೂ ಲಕ್ಷ್ಮಣನನ್ನು ಅನುಸರಿಸಿಹೋಗುತ್ತೇನೆ" ಎಂದು ನಾನಾ ರೀತಿಯಲ್ಲಿ ರಾಮನು ಗೋಳಾಡುತ್ತಾನೆ. ಇಂತಹ ಉತ್ಕಟವಾದ ಪ್ರೀತಿ, ತ್ಯಾಗ ಮತ್ತು ಭಕ್ತಿ ಬೇರೆ ಎಲ್ಲಾದರೂ ಕಾಣಲು ಸಾಧ್ಯವೆ!

ಪ್ರಜ್ಞೆ ಬಂದ ಬಳಿಕ ಲಕ್ಷ್ಮಣನು ಇಂದ್ರಜಿತುವನ್ನು ವಧಿಸಿದಾಗ, ರಾಮನು ಅವನನ್ನು ಆಲಿಂಗಿಸಿ, ನೆತ್ತಿಯನ್ನು ಮೂಸಿ, ಪ್ರೀತಿಯಿಂದ ಒತ್ತಾಯಮಾಡಿ ತೊಡೆಯ ಮೇಲೆ ಕೂಡಿಸಿಕೊಳ್ಳುತ್ತಾನೆ. ಅವನ ಗಾಯಗಳನ್ನು ಸವರುತ್ತಾ ಅತಿಶಯವಾದ ಪ್ರೇಮದಿಂದ ಮತ್ತೆ ಮತ್ತೆ ಲಕ್ಷ್ಮಣನನ್ನೇ ನೋಡುತ್ತಾನೆ.

"ರಾಮಲಕ್ಷ್ಮಣರು ಸತ್ತುಹೋದರು" ಎಂದು ಸೀತೆಗೆ ಮನದಟ್ಟುಮಾಡಿದರೆ, ಆಕೆ ತನ್ನ ವಶಳಾಗುವಳೆಂದು ರಾವಣನು, ಮಾಯೆಯಿಂದ ಮಾಡಿದ ರಾಮಲಕ್ಷ್ಮಣರ ಕತ್ತರಿಸಿದ ತಲೆಗಳನ್ನು ಸೀತೆಗೆ ತೋರಿಸುತ್ತಾನೆ. ಆಗ ಸೀತೆಯು ತನ್ನ ಕುಟುಂಬ, ಅತ್ತೆಯರು, ಅಯೋಧ್ಯೆಯ ಜನರೆಲ್ಲರನ್ನೂ ನೆನೆನೆನೆದು, "ಕುಟುಂಬವನ್ನೂ, ಕುಟುಂಬದ ಧರ್ಮವನ್ನೂ ರಕ್ಷಿಸಲಾಗದ ನನ್ನ ಜೀವನಕ್ಕೆ ಧಿಕ್ಕಾರ" ಎಂದು ಗೋಳಿಡುತ್ತಾಳೆ. ಇಲ್ಲಿ, ಸೀತೆಯು ಮೃದು ಹೃದಯ, ಇತರರ ಕಷ್ಟಕ್ಕೆ ಮರುಗುವ ಅನುಕಂಪ, ಶೀಲ, ತಿಳಿವಳಿಕೆ, ಸ್ಥೈರ್ಯ, ತಾಳ್ಮೆ ಇತ್ಯಾದಿ ವಿಶಿಷ್ಟ ಗುಣಗಳಿಂದ ಕೂಡಿದ ಅಪರೂಪದ ವ್ಯಕ್ತಿತ್ವವಾಗಿ ಕಂಗೊಳಿಸುತ್ತಾಳೆ. ಸೇರಿದ ಕುಲ, ತನ್ನ ಕುಲ – ಈ ಎರಡರ ಮರ್ಯಾದೆಯ ರಕ್ಷಣೆಗಾಗಿ ಕಷ್ಟಪರಂಪರೆಗಳನ್ನೇ ಸ್ವಸಂತೋಷದಿಂದ ಅಪ್ಪಿಕೊಂಡ ದಿಟ್ಟಹೆಣ್ಣು ಆಕೆ.

ಹೀಗೆ ರಾಮಾಯಣದಲ್ಲಿ ಕುಟುಂಬದ ಸದಸ್ಯರೆಲ್ಲರೂ ಸತ್ಯಧರ್ಮನಿಷ್ಠೆಗೆ ಬದ್ಧರಾಗಿರುವುದನ್ನೂ, ಪರಸ್ಪರ ಪೂರಕ, ಪೋಷಕ ಮನೋಧರ್ಮವನ್ನು ಹೊಂದಿರುವುದನ್ನೂ ಗಮನಿಸಬಹುದು. ತಪಸ್ವಿನಿ ಸುಮಿತ್ರೆ, ವಾತ್ಸಲ್ಯಮಯಿ ಕೌಸಲ್ಯೆ, ಮೈತ್ರಿಯ ಮೂರ್ತಿ ಗುಹ, ಸ್ನೇಹನಿಷ್ಠ ಜಟಾಯು, ಸ್ವಾರ್ಥತ್ಯಾಗಿಗಳಾದ ಲಕ್ಷ್ಮಣ–ಭರತ–ಶತ್ರುಘ್ನ, ಕಷ್ಟಸಹಿಷ್ಣು ಸೀತೆ – ಎಲ್ಲರೂ ಒಂದೇ ಧ್ಯೇಯದ ಕಡೆಗೆ ತುಡಿಯುತ್ತಿರುವುದನ್ನೂ, ಪ್ರತಿಯೊಬ್ಬರೂ ಒಬ್ಬರನ್ನೊಬ್ಬರು ಗೌರವಾದರಗಳಿಂದ ಕಾಣುತ್ತಾ ಧರ್ಮನಿಷ್ಠರಾಗಿರುವುದನ್ನೂ ಕಾಣಬಹುದು. ಇಂತಹ ಸರ್ವೋತ್ತಮ ಆದರ್ಶವು ನಮ್ಮ ಕುಟುಂಬಜೀವನಕ್ಕೆ ಮಾರ್ಗದರ್ಶನ ನೀಡಬಲ್ಲುದು; ಬಾಳೆಂಬ ಕತ್ತಲಿನ ಹಾದಿಯಲ್ಲಿ ದಾರಿದೀಪವಾಗಬಲ್ಲುದು. •

## ನಾವು ೧೦೫ ಜನ!

**ಪಾಂಡವರು ವನವಾಸ ಮಾಡುತ್ತಿದ್ದರು. ಆ ಸಮಯದಲ್ಲಿ ಅವರಿಗೆ ಕಿರುಕುಳ ಕೊಡಲು ಕೌರವರು ಅಲ್ಲಿಗೆ ಬಂದರು. ಕೌರವರಿಗೂ ಗಂಧರ್ವರಿಗೂ ಯಾವುದೋ ವಿಷಯಕ್ಕೆ ಜಗಳವಾಯಿತು. ಗಂಧರ್ವರು ಕೌರವರನ್ನು ಸೋಲಿಸಿದರು. ಈ ವಿಷಯ ಪಾಂಡವರಿಗೆ ಗೊತ್ತಾಯಿತು. ಧರ್ಮರಾಯ, "ನಾವು ಕೌರವರ ಸಹಾಯಕ್ಕೆ ಹೋಗಬೇಕು" ಎಂದು ಹೇಳಿದ. ಅದನ್ನು ಭೀಮ ವಿರೋಧಿಸಿದ. ದ್ರೌಪದಿಯೂ ತನಗಾದ ಅವಮಾನವನ್ನು ನೆನಸಿಕೊಂಡು ಇದನ್ನೇ ಸಮರ್ಥಿಸಿದಳು. ಆಗ ಧರ್ಮರಾಜ ಹೇಳಿದ, "ಹೌದು, ನೂರು ಜನ ಕೌರವರು ನಮ್ಮನ್ನು ಅನ್ಯಾಯವಾಗಿ ಕಾಡಿಗೆ ಕಳುಹಿಸಿದರು. ನಮಗೆ ಅನೇಕ ಕಷ್ಟಗಳನ್ನು ಕೊಟ್ಟರು. ಇದೆಲ್ಲಾ ನನಗೆ ಗೊತ್ತಿದೆ. ಆದರೆ ಈಗ ಗಂಧರ್ವರು ಅವರ ಮೇಲೆ ದಾಳಿ ಮಾಡಿದ್ದಾರೆ. ಈಗ ಅವರಿಗೆ ನಮ್ಮ ಸಹಾಯ ಬೇಕಾಗಿದೆ. ಎಷ್ಟೇ ಆಗಲಿ, ಅವರು ನಮ್ಮ ಸಹೋದರರೇ ಅಲ್ಲವೇ? ಹೊರಗಿನ ಶತ್ರುಗಳ ವಿರುದ್ಧ ನಾವು ಕೇವಲ ೫ ಅಥವಾ ೧೦೦ ಅಲ್ಲ. ನಾವು ೧೦೫ ಜನ!" (ಆಧಾರ)**

# ದುಡಿಯುವ ಹೆಣ್ಣುಮಕ್ಕಳು ಮತ್ತು ಕುಟುಂಬ ನಿರ್ವಹಣೆ

ಸೇವಂತಿ ಡಿ. ರೈ



ಅಂದು ಮೇ ತಿಂಗಳ ಎರಡನೇ ಭಾನುವಾರ. 'ಅಂತರರಾಷ್ಟ್ರೀಯ ತಾಯಂದಿರ ದಿನ'ವೆಂದು ಆಚರಿಸುವ ದಿನ. ನಮ್ಮ ಪಕ್ಕದ ಮನೆಯಲ್ಲಿ ಬಹಳ ಜೋರಾಗಿ ಮಾತು ಕೇಳಿಬರುತ್ತಿತ್ತು. ಮಗ ತನ್ನ ತಾಯಿಗೆ ಪ್ರೀತಿಯಿಂದ ಚಿನ್ನದ ಒಡವೆಯನ್ನು ಖರೀದಿಸಿ ತಂದಿದ್ದ. ಮಗ, ಸೊಸೆ ಇಬ್ಬರೂ ಅದನ್ನು ತಾಯಿಯ ಕೈಯಲ್ಲಿಟ್ಟು ಆಕೆಯ ಕಾಲಿಗೆ ನಮಸ್ಕರಿಸಿದರು. ಆದರೆ ಆ ತಾಯಿಯ ಮುಖದಲ್ಲಿ ಸಂತೋಷ ಕಾಣಲಿಲ್ಲ. ಬಹಳ ಬೆಲೆಬಾಳುವ ಆ ಬಳೆಗಳನ್ನು ತಿರುಗಿಸಿ, ತಿರುಗಿಸಿ ನೋಡಿದ ತಾಯಿ, ಅದನ್ನು ತನ್ನ ಮಗನ ಕೈಯಲ್ಲಿಟ್ಟು ಪ್ರಶ್ನೆಗಳ ಮಳೆಯನ್ನೇ ಸುರಿಸಿದಳು. ಮಗ ಸೊಸೆ ಬೆರಗಾಗಿ ಬೆಪ್ಪರಂತೆ ನಿಂತರು. ತಾಯಿಯ ಜೋರುಮಾತಿಗೆ ಕಾರಣವಿಷ್ಟೆ, "ತನ್ನ ಮಗ ಕೆಲಸಕ್ಕೆ ಸೇರಿ ಕೇವಲ ಮೂರು ವರ್ಷಗಳಾಗಿವೆ. ಆತನಿಗೆ ಸಂಬಳ ಲಕ್ಷಾಂತರ ರೂಪಾಯಿ ಏನೂ ಇಲ್ಲ. ತನಗೆ ಇಷ್ಟು ದುಬಾರಿಯ ಒಡವೆ ತರಬೇಕಾದರೆ, ಆತನ ಬಳಿ ಸುಲಭದಲ್ಲಿ ಬಂದ ಹಣ ಇದ್ದಿರಬೇಕು" ಎಂದು ಆಕೆಯ ವಾದ. ಕೊನೆಗೆ ಮಗ, ತಾನು ಯಾರದೋ ಒಂದು ಕಷ್ಟಕರವಾದ ಕೆಲಸವನ್ನು ಕೆಲವೇ ದಿನಗಳಲ್ಲಿ ಮಾಡಿ ಕೊಟ್ಟಿರುವುದರಿಂದ ಆತ, ತಾನು ಕೇಳದಿದ್ದರೂ ₹ ೨೫,೦೦೦/– ಅನ್ನು ತನಗೆ ಕೊಟ್ಟಿರುವುದಾಗಿ ಹೇಳಿದ. ಅದರಲ್ಲಿ ಸ್ವಲ್ಪ ಅಂಶವನ್ನು ತನ್ನ ಅಧಿಕಾರಿಗೆ ಮತ್ತು ಇತರರಿಗೆ ಕೊಟ್ಟು, ಉಳಿದ ಹಣದಲ್ಲಿ ಆ ಬಳೆಯನ್ನು ತಂದಿರುವುದಾಗಿ ತಿಳಿಸಿದ. ತಾಯಿ ಆ ಬಳೆಯನ್ನು ಸ್ವೀಕರಿಸಲಿಲ್ಲ. ಆ ಬಳೆ "ತನ್ನ ಮಗನ ಕಷ್ಟದ ದುಡಿಮೆಯ ಫಲ ಅಲ್ಲ" ಎಂದು ಆಕೆಯ ವಾದ. "ಕಷ್ಟದಲ್ಲಿದ್ದರೂ, ಮರ್ಯಾದೆಯಿಂದ ದುಡಿದು, ಮಕ್ಕಳನ್ನು ಓದಿಸಿ, ಇನ್ನೊಬ್ಬರ ಋಣಕ್ಕೆ ಬೀಳದೆ, ಮರ್ಯಾದಸ್ಥರಾಗಿ ಬಾಳಿದ ತಮಗೆ ಆ ಲಂಚದ ಒಡವೆ ಬೇಡ" ಎಂದಳು. ಕಷ್ಟಪಟ್ಟು ದುಡಿದ ಹಣಮಾತ್ರ ತಮ್ಮದು ಎಂದು ಸೊಸೆಗೆ ಬುದ್ಧಿವಾದ ಹೇಳಿದಳು. "ನಿನ್ನ ಪತಿ ಎಂದೂ ಲಂಚಕ್ಕೆ ಕೈನೀಡದಂತೆ ನೋಡಿಕೊಳ್ಳುವ ಜವಾಬ್ದಾರಿ ನಿನ್ನದೇ" ಎಂದು ತಾಕೀತು ಮಾಡಿದಳು.

ತಾಯಿ ತನ್ನ ಮಾತನ್ನು ಅಲ್ಲಿಗೇ ನಿಲ್ಲಿಸಲಿಲ್ಲ. ಇದೇ ಸರಿಯಾದ ಸಂದರ್ಭ ಎಂದು ಹೇಳಬೇಕೆಂದಿದ್ದುದನ್ನೆಲ್ಲಾ ಹೇಳಿದಳು, "ನಿಮಗೆ ಇನ್ನು ಮಕ್ಕಳಾಗುತ್ತವೆ, ಸಂಸಾರ ಬೆಳೆಯುತ್ತದೆ. ಸಂಸಾರ ನಿಭಾಯಿಸಲು ಇಬ್ಬರೂ ದುಡಿಯಬೇಕಾಗಬಹುದು. ಆದುದರಿಂದ ಪತಿಪತ್ನಿಯರಿಬ್ಬರೂ ಮನೆಗೆಲಸವನ್ನು ಹಂಚಿಕೊಂಡು ಮಾಡಬೇಕು. ಹಣವಿದೆ ಎಂದು ಮಕ್ಕಳು ಕೇಳಿದ್ದನ್ನೆಲ್ಲಾ ಕೊಟ್ಟು, ಅವರು ಹೇಳಿದ್ದನ್ನೆಲ್ಲಾ ಕೇಳಿಕೊಂಡಿರುವುದಲ್ಲ. ಮಕ್ಕಳ ಮುಂದೆ ಜಗಳವಾಡದೆ, ಇಬ್ಬರೂ ಮಾರ್ಗದರ್ಶನ ಮಾಡಬೇಕು. ನಮ್ಮ ಸಂಸ್ಕೃತಿಯ ಪರಿಚಯ ಮಾಡಿಕೊಡಬೇಕು. ಯಾವುದೇ ಸಮಸ್ಯೆ ಬಂದರೂ, ಯಾವುದೇ ನಿರ್ಣಯವನ್ನು ತೆಗೆದುಕೊಳ್ಳುವಾಗಲೂ, ಇಬ್ಬರೂ ಚರ್ಚಿಸಿ ನಿರ್ಣಯಕ್ಕೆ ಬರಬೇಕು." ಹೀಗೆಲ್ಲಾ ತಾಯಿ ಮಗ–ಸೊಸೆಯರಿಗೆ ಉಪದೇಶ ಮಾಡಿದಳು. ಈ ಗೌರವಾನ್ವಿತ ಮಹಿಳೆಯಂಥವರು ಎಷ್ಟು ಜನ ತಾನೇ ನಮ್ಮಲ್ಲಿದ್ದಾರೆ?

ಸಮಾಜದ ಮೂಲಭೂತ ಘಟಕ ಕುಟುಂಬ. ಗೃಹಿಣಿ ದಕ್ಷಳಾಗಿದ್ದರೆ ಕುಟುಂಬ ಚೆನ್ನಾಗಿರುತ್ತದೆ. ಕುಟುಂಬ ಸರಿಯಾಗಿದ್ದರೆ ಸಮಾಜ ಸರಿಯಾಗಿರುತ್ತದೆ. ಸಮಾಜ ಸರಿಯಾಗಿದ್ದರೆ, ಊರು ದೇಶ ಎಲ್ಲಾ ಸರಿಯಾಗಿರುತ್ತದೆ.

ಇಂದಿನ ಕಾಲದಲ್ಲಿ ಹೆಣ್ಣುಮಕ್ಕಳು ಹೊರಗೆ ಹೋಗಿ ದುಡಿಯುವುದು ಸಾಮಾನ್ಯದ ಸಂಗತಿ. ಇದರ ಜೊತೆಗೆ ಮನೆಗೆಲಸದ ಭಾರವೂ ಅವರ ಮೇಲೆಯೇ ಬೀಳುತ್ತಿದೆ. ಇವೆರಡನ್ನೂ ಸರಿದೂಗಿಸಿಕೊಂಡು ಕುಟುಂಬ ನಿರ್ವಹಣೆಯನ್ನು ಮಾಡಬೇಕಾದ ಕಠಿಣ ಪರಿಸ್ಥಿತಿಯನ್ನು ಅವರು ಎದುರಿಸಬೇಕಾಗುತ್ತದೆ. ಇಂಥ ಸನ್ನಿವೇಶದಲ್ಲಿ ತಲೆದೋರುವ ಹತ್ತುಹಲವು ಸಮಸ್ಯೆಗಳನ್ನು, ಕಣ್ಣಿಗೆ ಕಟ್ಟುವ ಹಾಗೆ ವಿಶ್ಲೇಷಿಸಿರುವ ಲೇಖಕಿ ನಿವೃತ್ತ ಕಾಲೇಜು ಅಧ್ಯಾಪಕಿ. ಮೈಸೂರು ರಾಮಕೃಷ್ಣ ಆಶ್ರಮದ ಭಕ್ತರಾಗಿರುವ ಇವರ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಈಗಾಗಲೇ ಪ್ರಕಟವಾಗಿವೆ.

ಆರೋಗ್ಯವಂತ ಸಮಾಜದಿಂದ ದುಷ್ಕರ್ಮಿಗಳು, ಉಗ್ರಗಾಮಿಗಳು ಬರಲು ಸಾಧ್ಯವಿಲ್ಲ. ಒಂದು ಕುಟುಂಬದಲ್ಲುಂಟಾದ ಅವ್ಯವಸ್ಥೆ ಆ ಕುಟುಂಬವನ್ನು ಮಾತ್ರವಲ್ಲ, ವಿಷವರ್ತುಲದಂತೆ ಸುತ್ತಿ ಸುತ್ತಿ ಇಡೀ ದೇಶವನ್ನೇ ಕಬಳಿಸಬಹುದು. ಸಂತೋಷದಿಂದ ತುಂಬಿದ ಸುಸಂಸ್ಕೃತ ಕುಟುಂಬದಿಂದ ಬಂದ ಸ್ತ್ರೀ ಪುರುಷರು, ತಾವು ಕೆಲಸ ಮಾಡುವ ಸ್ಥಳದಲ್ಲಿ ಸಭ್ಯತೆಯ ಬೆಳಕನ್ನು ಚೆಲ್ಲುವರು; ಹೆಚ್ಚಿನ ಗುಣಮಟ್ಟಕ್ಕೆ, ದಕ್ಷತೆಗೆ ಕಾರಣರಾಗುವರು. ಹೊಸ ಹೊಸ ರಚನಾತ್ಮಕ ಸೂಚನೆಗಳನ್ನು, ಸಲಹೆಗಳನ್ನು ಅವರು ನೀಡಬಲ್ಲರು. ಶಿಕ್ಷಕರಾಗಿದ್ದಲ್ಲಿ ಉತ್ತಮ ಪ್ರಜೆಗಳನ್ನು ಸೃಷ್ಟಿಸಬಲ್ಲರು. ಬೆಳ್ಳಬೆಳಗ್ಗೆಯೇ ಮನೆಯಲ್ಲಿ ಜಗಳಮಾಡಿಕೊಂಡು ಹೊರಟಲ್ಲಿ, ಆ ದಿನ ಅವರ ಕೆಲಸ ನಕಾರಾತ್ಮಕವಾಗಬಹುದು. ಆದುದರಿಂದಲೇ ದೇಶದ ಅಭಿವೃದ್ಧಿಯಲ್ಲಿ ಕುಟುಂಬ ಮಹತ್ವವಾದ ಮೂಲಭೂತ ಘಟಕ.

ಈಗೀಗ ಪ್ರತಿಯೊಬ್ಬರ, ಅದರಲ್ಲೂ ಮುಖ್ಯವಾಗಿ ಮಕ್ಕಳ ಅಗತ್ಯಗಳು ಹೆಚ್ಚುತ್ತಿರುವಾಗ ಅದನ್ನು ಪೂರೈಸಲು ತಂದೆತಾಯಿಗಳಿಬ್ಬರೂ ದುಡಿಯಬೇಕಾದ ಸಂದರ್ಭ ಹೆಚ್ಚಿನ ಕುಟುಂಬಗಳಲ್ಲಿ ಕಂಡುಬರುತ್ತಿದೆ. ಹಿಂದಿನ ಕಾಲದಲ್ಲಿ ಬಹಳ ಅಲ್ಪ ಸಂಖ್ಯೆಯಲ್ಲಿ ಮಹಿಳೆಯರು ಮನೆಬಿಟ್ಟು, ಹೊರಗೆ ಬಂದು ದುಡಿಯುತ್ತಿದ್ದರು. ಈಗ ಪರಿಸ್ಥಿತಿ ಬದಲಾಗಿದ್ದು, ಹೆಚ್ಚಿನ ಸಂಖ್ಯೆಯ ಮಹಿಳೆಯರು ಸಂಘಸಂಸ್ಥೆಗಳಲ್ಲಿ, ಶಾಲಾಕಾಲೇಜುಗಳಲ್ಲಿ, ಕಛೇರಿಗಳಲ್ಲಿ, ಕಾರ್ಖಾನೆಗಳಲ್ಲಿ, ಸಂಶೋಧನಾಲಯಗಳಲ್ಲಿ ದುಡಿಯುತ್ತಿರುವುದನ್ನು ಕಾಣಬಹುದು. ೨೦ನೇ ಶತಮಾನದಲ್ಲಿ ಮಹಿಳೆಯರು ಹೆಚ್ಚಾಗಿ ಅಧ್ಯಾಪಕರಾಗಿ, ವೈದ್ಯರಾಗಿ, ದಾದಿಯರಾಗಿ ಕೆಲಸ ಮಾಡುತ್ತಿದ್ದರೆ, ೨೧ನೇ ಶತಮಾನದಲ್ಲಿ ಪುರುಷರೇ ಅಧಿಕವಾಗಿದ್ದ ಕ್ಷೇತ್ರಗಳಲ್ಲೂ ನೈಪುಣ್ಯತೆಯಿಂದ ಕೆಲಸ ಮಾಡುತ್ತಿದ್ದಾರೆ. ಸೇನೆ ಮತ್ತು ಪೊಲೀಸ್ ಇಲಾಖೆಗಳಲ್ಲೂ ಸೇವೆ ಸಲ್ಲಿಸುತ್ತಿದ್ದಾರೆ. ಸಾಫ್ಟ್‌ವೇರ್ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಹೆಚ್ಚಿನ ತರಬೇತಿ ಪಡೆದ ಸ್ತ್ರೀ ಪುರುಷರು, ಪ್ರತಿ ತಿಂಗಳೂ ಲಕ್ಷಾಂತರ ರೂಪಾಯಿಗಳಷ್ಟು ವರಮಾನ ಗಳಿಸುತ್ತಿದ್ದಾರೆ. ಇವರಲ್ಲಿ ಹೆಚ್ಚಿನವರು ಬಹಳ ದುಬಾರಿಯಾದ ಅಂತರರಾಷ್ಟ್ರೀಯ ಮಟ್ಟದ ಶಾಲಾಕಾಲೇಜುಗಳಿಗೆ ತಮ್ಮ ಮಕ್ಕಳನ್ನು ಸೇರಿಸುವುದೇ ಅಲ್ಲದೆ, ಐಷಾರಾಮದ ಸೌಲಭ್ಯಗಳನ್ನು ಮಕ್ಕಳಿಗೆ ಚಿಕ್ಕಂದಿನಲ್ಲೇ ಒದಗಿಸುತ್ತಾರೆ. ಇಲ್ಲೊಂದು ಗಮನಿಸಬೇಕಾದ ವಿಷಯವೆಂದರೆ, ಇವರು ತಮ್ಮ ವರಮಾನವನ್ನು ಹೇಗೆ ಖರ್ಚು ಮಾಡುತ್ತಾರೆ ಎಂಬುದು. ಆದರೆ ಅಂತಹ ಶ್ರೀಮಂತ ಕುಟುಂಬಗಳ ಸಂಖ್ಯೆ ಕಡಿಮೆ. ಮಧ್ಯಮವರ್ಗದವರೇ ಹೆಚ್ಚಾಗಿ ಇರುವ ನಮ್ಮ ಸಮಾಜದಲ್ಲಿ ಸಾಕಷ್ಟು ಮಹಿಳೆಯರು ಉದ್ಯೋಗಸ್ಥರು. ಕಾರ್ಮಿಕರಾಗಿ ದುಡಿಯುವ ಮಹಿಳೆಯರೂ ಬಹಳಷ್ಟು ಜನ ಇದ್ದಾರೆ. ಮಹಿಳೆ ಯಾವ ಮಟ್ಟದಲ್ಲೇ ಇರಲಿ, ಕುಟುಂಬನಿರ್ವಹಣೆ ಆಕೆಯದೇ ಜವಾಬ್ದಾರಿ ಎಂದು ಸಮಾಜ ತಿಳಿದುಕೊಂಡಿದೆ. ಸಮಾಜವನ್ನು ಬಿಟ್ಟು, ಅದರ ರೀತಿನೀತಿಗಳನ್ನು ಬಿಟ್ಟು ಇರುವುದು ಮಹಿಳೆಗೆ ಕಷ್ಟ. ಸಂಸಾರ ನಡೆಸುವುದು, ಮಕ್ಕಳು ಸರಿದಾರಿಯಲ್ಲಿ ನಡೆಯುವಂತೆ ನೋಡಿಕೊಳ್ಳುವುದು ಮಹಿಳೆಯ ಜವಾಬ್ದಾರಿ ಎಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ತಮ್ಮ ತಂದೆಯ ದುರಭ್ಯಾಸವನ್ನು ಮಕ್ಕಳು ಕಲಿತರೂ, ಹದಿಹರೆಯದ ಮಕ್ಕಳ ವಿರೋಧಾಭಾಸದ ನಡವಳಿಕೆಗೂ, ಆ ಮಕ್ಕಳ ತಾಯಂದಿರ ಕರ್ತವ್ಯಲೋಪವೇ ಕಾರಣ ಎಂದು ಸಮಾಜ ಹೇಳುತ್ತದೆ. ಮಕ್ಕಳ ಮೇಲಾಗುವ ತಂದೆಯ ವ್ಯಕ್ತಿತ್ವದ ಪ್ರಭಾವ ಮತ್ತು ಆತನ ಕರ್ತವ್ಯಲೋಪ –ಇವುಗಳನ್ನು ಸಮಾಜ ಪರಿಗಣಿಸುವುದೇ ಇಲ್ಲ!

ಸಮಾಜದ ಮೂಲಭೂತ ಘಟಕ ಕುಟುಂಬ ಎಂದಾಗ, ಆ ಕುಟುಂಬದ ಮುಖ್ಯ ಸ್ತಂಭ ಒಂದು ಹೆಣ್ಣು. ಆ ಹೆಣ್ಣು ಇಲ್ಲದಿದ್ದರೆ ಕುಟುಂಬ ಇಲ್ಲ, ಮನೆ ಇಲ್ಲ ಅಥವಾ ಆ ಮನೆಗೆ ಲಕ್ಷಣ ಇಲ್ಲ ಎನ್ನುವರು. ಹೆಣ್ಣೇ ತನ್ನ ಸಂಸಾರವನ್ನು ಅಚ್ಚುಕಟ್ಟಾಗಿ ನಿಭಾಯಿಸಿಕೊಂಡು ಹೋಗುವವಳು, 'ಹೆಣ್ಣು ಸಂಸಾರದ ಕಣ್ಣು' ಎನ್ನುವರು. "ಯಾವ ದೇಶದಲ್ಲಿ ಮಹಿಳೆಯರಿಗೆ ಗೌರವ ಇದೆಯೋ ಆ ದೇಶ ಅಭಿವೃದ್ಧಿಗೊಳ್ಳುತ್ತದೆ" ಎಂಬ ಮಾತು ಕೂಡ ಪ್ರಚಲಿತವಾಗಿದೆ.

ತಾವು ಕೆಲಸ ಮಾಡುವ ಸ್ಥಳಗಳಲ್ಲಿ ಹೆಣ್ಣುಮಕ್ಕಳು ಸಣ್ಣಕೆಲಸದಿಂದ ಹಿಡಿದು ದೊಡ್ಡ ಅಧಿಕಾರದವರೆಗೆ ಯಶಸ್ವಿಯಾಗಿ ಕಾರ್ಯ ನಿರ್ವಹಿಸುವುದನ್ನು ಕಾಣಬಹುದು. ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕಿಯಾಗಿ, ಅದರಲ್ಲೂ ಪ್ರಾಥಮಿಕ ಮತ್ತು ಶಿಶುವಿಹಾರಗಳಲ್ಲಿ ವಿದ್ಯಾದಾನ ಮಾಡುವವರು ಮಹಿಳೆಯರೇ. ಮಹಿಳೆಯರಲ್ಲಿರುವ ಮಾತೃತ್ವದ ಭಾವನೆಯಿಂದಾಗಿ ಪ್ರಾಥಮಿಕ ಶಾಲೆಗಳಲ್ಲಿ, ಶಿಶುವಿಹಾರಗಳಲ್ಲಿ ಶಿಕ್ಷಕರಿಗಿಂತ ಶಿಕ್ಷಕಿಯರೇ ಹೆಚ್ಚು.

ಮಹಿಳೆ ಎಂದು ಹೇಳಿದಾಗ ನಮ್ಮ ಮನಸ್ಸಿಗೆ ಬರುವುದು, ಒಂದು ಸಂಸಾರವನ್ನು ನಿರ್ವಹಿಸುತ್ತಿರುವ ಮಹಿಳೆ. ಈ ೨೧ನೇ ಶತಮಾನದಲ್ಲಿ ಸಂಸಾರದ ತಾಪತ್ರಯ ಇಲ್ಲದೇ ಏಕಾಂಗಿಯಾಗಿ, ಸ್ವತಂತ್ರವಾಗಿ, ತಮ್ಮ ಪಾಡಿಗೆ ಇರುವ, ದುಡಿಯುವ ಮಹಿಳೆಯರು ಅನೇಕರು ಇದ್ದಾರೆ. ಇವರು ತಮ್ಮ ಬಿಡುವಿನ ಸಮಯವನ್ನು ಸಮಾಜಸೇವೆಗಾಗಿ

ವಿನಿಯೋಗಿಸುತ್ತಾರೆ. ಈ ಸಂದರ್ಭದಲ್ಲಿ ನಾವು ಗತಕಾಲದ ಕೆಲವು ಮಂದಿ ರಾಣಿಯರನ್ನು ನೆನಪಿಸಿಕೊಳ್ಳಬಹುದು. ಅವರ ಸಂಸಾರನಿರ್ವಹಣೆ ಅವರದೇ ಆಗಿತ್ತು. ಅವರು ತಮ್ಮ ಮಕ್ಕಳಲ್ಲಿ, ಪ್ರಜೆಗಳಲ್ಲಿ ದೇಶಭಕ್ತಿಯನ್ನು ತುಂಬಿ, ಆಡಳಿತ ನಡೆಸುತ್ತಿದ್ದರು. ಇಂತಹ ರಾಣಿಯರ ಮಧ್ಯೆ ಧ್ರುವತಾರೆಯಂತೆ ಬೆಳಗುವಾಕೆ ಉಳ್ಳಾಲದ ರಾಣಿ ಅಬ್ಬಕ್ಕದೇವಿ. ಕ್ರಿ.ಶ. ೧೬ನೇ ಶತಮಾನದಲ್ಲಿ ಪೋರ್ಚುಗೀಸರು ಕರ್ನಾಟಕದ ಪಶ್ಚಿಮ ಕರಾವಳಿಯಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದ್ದರು. ಈ ಸಂದರ್ಭದಲ್ಲಿ ಪೋರ್ಚುಗೀಸರಿಗೆ ಸಹಕರಿಸುತ್ತಿದ್ದ ತನ್ನ ಪತಿಯನ್ನು ತ್ಯಜಿಸಿ, ತವರೂರಾದ ಉಳ್ಳಾಲಕ್ಕೆ ಹಿಂದಿರುಗಿದ ರಾಣಿ ಅಬ್ಬಕ್ಕದೇವಿ, ಪೋರ್ಚುಗೀಸರನ್ನು ಯುದ್ಧದಲ್ಲಿ ಸೋಲಿಸಿ, ತುಳುನಾಡಿನಿಂದ ಅವರನ್ನು ಓಡಿಸಿದಳು. ಆಗ ಯೂರೋಪಿನಲ್ಲಿಯೇ ಬಲಿಷ್ಠರಾಗಿದ್ದ ಪೋರ್ಚುಗೀಸರನ್ನು, ಒಂದು ಪುಟ್ಟರಾಜ್ಯದ ರಾಣಿ ಸೋಲಿಸಿರುವುದು ಜಗತ್ತನ್ನೇ ಅಚ್ಚರಿಗೊಳಿಸಿತು; ಇತಿಹಾಸದಲ್ಲಿ ಇದು ಒಂದು ದೊಡ್ಡ ಘಟನೆ ಎನಿಸಿತು. ಆಕೆಯ ಮಗಳು ಎರಡನೆಯ ಅಬ್ಬಕ್ಕದೇವಿ ಪೋರ್ಚುಗೀಸರಿಗೆ ಸಿಂಹಸ್ವಪ್ನವೆನಿಸಿದ್ದಳು.

ಏಕಾಂಗಿಯಾಗಿ ಇರುವ ಮಹಿಳೆಯರಿಗಿಂತ, ಸಂಸಾರದಲ್ಲಿದ್ದುಕೊಂಡು ದುಡಿಯುವ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಸಂಸಾರದಲ್ಲಿರುವ ಮಹಿಳೆ ಎಂದಾಗ, ವಿವಾಹಿತಳಾಗಿ, ತನ್ನ ಪತಿ, ಮಕ್ಕಳು ಮತ್ತಿತರ ಸಂಬಂಧಿಗಳು ಇರುವ ಸಂಸಾರದಲ್ಲಿ ಇರುವ ಮಹಿಳೆಯಾಗಿರಬಹುದು. ಇಲ್ಲವೆ, ವಿದ್ಯೆ ಕಲಿತು, ಹಲವಾರು ಕಾರಣಗಳಿಂದಾಗಿ ವಿವಾಹವಾಗದೆ, ಕೆಲಸಕ್ಕೆ ಸೇರಿಕೊಂಡು, ತನ್ನ ತಂಗಿ, ತಮ್ಮಂದಿರನ್ನು ಓದಿಸಿ, ಅವರನ್ನು ಸರಿದಾರಿಗೆ ತರುವ ಮಹಿಳೆಯರು ಕೂಡ ಇರಬಹುದು. ಇಂಥ ಅವಿವಾಹಿತ ಮಹಿಳೆಗೆ 'ಪತಿ' ಎನ್ನುವವನೊಬ್ಬ ಇಲ್ಲದಿದ್ದರೂ ವೃದ್ಧ ತಂದೆ, ತಾಯಿ, ಅಕ್ಕ, ತಂಗಿ, ತಮ್ಮ ಇರುತ್ತಾರೆ. ಸೋದರಸಂಬಂಧಿಗಳೂ ಜೊತೆಗೆ ಇರಬಹುದು. ಆಕೆ ತಾನೊಬ್ಬಳೇ ದುಡಿದು, ತನ್ನ ಅಗತ್ಯಗಳನ್ನು ಮಿತಿಗೊಳಿಸಿಕೊಂಡು, ತನ್ನ ತಮ್ಮತಂಗಿಯರನ್ನು ಓದಿಸಿ, ಅವರಿಗೆ ಉದ್ಯೋಗ ದೊರಕಿಸಿಕೊಟ್ಟು, ವಿವಾಹವನ್ನೂ ಮಾಡಿಸುತ್ತಾಳೆ. ಕುಟುಂಬದ ಎಲ್ಲಾ ಜವಾಬ್ದಾರಿಯನ್ನೂ ಹೊರುತ್ತಾಳೆ. ತನ್ನ ಆಶೆಗಳನ್ನು, ಅಗತ್ಯಗಳನ್ನು ಅದುಮಿಟ್ಟು, ಮನೆಮಂದಿಯ ಭಾವನೆಗಳಿಗೆ ಸ್ಪಂದಿಸಿ, ಮನೆಯ ಶಾಂತಿಯನ್ನು ಕಾಪಾಡಲು ಹಗಲೂರಾತ್ರಿ ದುಡಿಯುತ್ತಾಳೆ.

ಈ ಅವಿವಾಹಿತ ಮಹಿಳೆಗೆ ತನ್ನ ಕುಟುಂಬವನ್ನು ತಾನು ಚೆನ್ನಾಗಿ ನಿರ್ವಹಿಸಿಕೊಂಡು ಬಂದಿರುವ ತೃಪ್ತಿ ಇರುತ್ತದೆ. ಆದರೆ ಆಕೆ ಮಾಡಿದ ತ್ಯಾಗ! ಆಕೆಗೆ ಏನಾದರೂ ಆಸೆ ಆಕಾಂಕ್ಷೆಗಳಿದ್ದರೆ ಅವುಗಳೆಲ್ಲವನ್ನೂ ತ್ಯಾಗಮಾಡಿ, 'ತ್ಯಾಗಮಯಿ' ಎನಿಸಿಕೊಳ್ಳುತ್ತಾಳೆ. ಹುತಾತ್ಮಳಂತೆ ಕೆಲಸ ಮಾಡುವುದೇ ಅವಳ ಆಸೆ ಆಗಿರುತ್ತದೆಯೇ? ಆಕೆ ಅದಕ್ಕೆ ತೆರುವ ಬೆಲೆ! ಆದರೆ ಸ್ತ್ರೀವಾದಿಗಳು ಹೇಳುತ್ತಾರೆ, ಆಕೆಗೆ 'ತ್ಯಾಗಮಯಿ' ಪಟ್ಟ ಬೇಡ, ಆಕೆಯ ಅಸ್ತಿತ್ವವನ್ನು ಗುರುತಿಸಿ ಗೌರವಿಸುವುದು ಮುಖ್ಯ ಎಂದು.

ಇನ್ನು ವಿವಾಹವಾಗಿ, ತನ್ನ ಪತಿ, ಮಕ್ಕಳ ಜೊತೆಗೆ ಸಂಸಾರ ಮಾಡುವ ಓರ್ವ ದುಡಿಯುವ ಮಹಿಳೆಯ ವಿಚಾರವನ್ನು ತೆಗೆದುಕೊಳ್ಳೋಣ. ಆಕೆಯ ಸಣ್ಣ ಕುಟುಂಬ ಮೇಲೆ ಹೇಳಿದ ಕುಟುಂಬಕ್ಕಿಂತ ಭಿನ್ನವಾಗೇನೂ ಇರುವುದಿಲ್ಲ. ಇನ್ನು ಮನೆಯಲ್ಲಿ ಹಿರಿಯರಿದ್ದರೆ, ಅವರ ಆರೈಕೆ, ಅವರ ಆಸೆಗಳ ಪೂರೈಕೆ – ಎಲ್ಲವೂ ಸೇರಿಕೊಳ್ಳುತ್ತವೆ. ತನ್ನ ಪತಿಯ ಮನೋಭಾವ, ಅವನ ಗುಣ, ಅವನಲ್ಲಿ ಇರಬಹುದಾದ ಕೀಳರಿಮೆ ಅಥವಾ ಅಹಂಕಾರ – ಈ ಎಲ್ಲ ಭ್ರಾಂತಿಗಳಿಗೂ ಆಕೆ ಹೊಂದಿಕೊಳ್ಳಬೇಕು. ಕೆಲವೊಮ್ಮೆ ಆಕೆ ತನಗೆ ತಾನೇ, "ತಾನೇ ಏಕೆ ಎಲ್ಲರಿಗೂ ಹೊಂದಿಕೊಳ್ಳಬೇಕು?" ಎಂದು ಪ್ರಶ್ನೆ ಹಾಕಿಕೊಳ್ಳುತ್ತಾಳೆ. ಪತಿಪತ್ನಿಯರಿಬ್ಬರಲ್ಲೂ ಅಹಂಕಾರ ಹೆಚ್ಚಿದ್ದಾಗ, ಅವರ ಮಧ್ಯೆ ಘರ್ಷಣೆ ನಡೆದು, ಸಂಸಾರನೌಕೆ ದಿಕ್ಕು ತಪ್ಪುವ ಸಾಧ್ಯತೆ ಇದೆ. ಇದರ ದುಷ್ಪರಿಣಾಮ ಮಕ್ಕಳ ಮೇಲೆ ಖಂಡಿತವಾಗಿಯೂ ಆಗುತ್ತದೆ. ಈ ಸಂದರ್ಭದಲ್ಲಿ ತನ್ನ ಸಂಸಾರದ 'ನೌಕಾಘಾತ'ವಾಗದಂತೆ ಮಹಿಳೆ ಸರ್ವರೀತಿಯಲ್ಲಿಯೂ ಪ್ರಯತ್ನಿಸುತ್ತಾಳೆ. ಆದರೂ ಕೆಲವೊಮ್ಮೆ ಸಂದರ್ಭಗಳು ಕೈಮೀರಿ ಹೋಗಿ ವಿಚ್ಛೇದನವಾಗುವ ಪರಿಸ್ಥಿತಿ ಬಂದೊದಗುತ್ತದೆ. ಈಗೀಗ ವಿಚ್ಛೇದನಗಳು ಹೆಚ್ಚುತ್ತಿರುವುದನ್ನು ಕಾಣಬಹುದು. ೨೧ನೇ ಶತಮಾನ 'ವಿಚ್ಛೇದನಗಳ ಶತಮಾನ' ಎಂದು ಕುಖ್ಯಾತಿ ಪಡೆಯದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ಸ್ತ್ರೀಪುರುಷರ ಕರ್ತವ್ಯ. ಪತಿಪತ್ನಿಯರು ಒಬ್ಬರನ್ನೊಬ್ಬರು ಅರಿತು ನಡೆದಾಗ ಈ ಸಮಸ್ಯೆ ಬರುವುದಿಲ್ಲ.

ಬಹುತೇಕ ಮಹಿಳೆಯರಿಗೆ ಸಂಸಾರವನ್ನು ಬಿಟ್ಟು ಸ್ವತಂತ್ರರಾಗುವ ಸಾಮರ್ಥ್ಯ ಇರುವುದಿಲ್ಲ. ಆಗ ಆಕೆ ಎಲ್ಲರಿಗೂ, ಎಲ್ಲದಕ್ಕೂ ಹೊಂದಿಕೊಂಡು, ಕುಟುಂಬದ ನಿರ್ವಹಣೆ ಮಾಡಲೇಬೇಕಾಗುತ್ತದೆ. ಒಂದು ಕಡೆ ಮಕ್ಕಳು ಬೆಳೆದು